# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 59 (599)
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ
ಉತ್ತರಿಸಬೇಕಾದ ದಿನಾಂಕ : 14.08.2025
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಪ್ರಸ್ತುತ ರಾಜ್ಯದ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಚಾಲ್ತಿಯಲ್ಲಿರುವ ಶೇ.56% ಮೀಸಲಾತಿಯು ಕಾನೂನು ಬದ್ಧವಾಗಿದೆಯೇ. | **ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022**ರನ್ವಯ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಗಮನದಲ್ಲಿರಿಸಿಕೊಂಡು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡಾ ಹದಿನೈದರಿಂದ ಶೇಕಡ ಹದಿನೇಳರಷ್ಟಕ್ಕೆ ಹಾಗೂ ಶೇಕಡಾ ಮೂರರಿಂದ ಶೇಕಡ ಏಳರಷ್ಟಕ್ಕೆ ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ. ಸದರಿ ಅಧಿನಿಯಮದಡಿ ಒಟ್ಟು ಮೀಸಲಾತಿಯನ್ನು ಶೇ.50 ರಿಂದ ಶೇ.56ಕ್ಕೆ ಹೆಚ್ಚಿಸಲಾಗಿರುತ್ತದೆ. |
| ಆ) | ಸದರಿ 56% ಮೀಸಲಾತಿಯನ್ನು ಕಾನೂನಾತ್ಮಕ ಮತ್ತು ಶಾಸನಾತ್ಮಕವಾಗಿ ಜಾರಿಗೆ ತಂದ ವಿಧಾನದ ಕುರಿತು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು; | ಸರ್ಕಾರದ ಆದೇಶ ಸಂಖ್ಯೆ:SWD 251 BCA 94, ದಿನಾಂಕ:31.01.1995ರನ್ವಯ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಸಮೂಹದವರಿಗೆ ಈ ಕೆಳಕಂಡಂತೆ ನೇರ ನೇಮಕಾತಿಗಳಲ್ಲಿ ಮೀಸಲಾತಿ ಪ್ರಮಾಣವನ್ನು ನಿಗದಿಪಡಿಸಲಾಗಿರುತ್ತದೆ.<br>ಪ್ರವರ್ಗ –I - 4%<br>ಪ್ರವರ್ಗ –II(ಎ) - 15%<br>ಪ್ರವರ್ಗ –II (ಬಿ) - 4%<br>ಪ್ರವರ್ಗ –III (ಎ) - 4%<br>ಪ್ರವರ್ಗ –III (ಬಿ) - 5%<br>ಪರಿಶಿಷ್ಟ ಜಾತಿ -15%<br>ಪರಿಶಿಷ್ಟ ಪಂಗಡ - 3%<br>ಒಟ್ಟು - 50%<br><br>ಮುಂದುವರೆದು, **ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022**ರನ್ವಯ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು |

| | | |
|---|---|---|
| | | ಗಮನದಲ್ಲಿರಿಸಿಕೊಂಡು ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡಾ ಹದಿನೈದರಿಂದ ಶೇಕಡ ಹದಿನೇಳರಷ್ಟಕ್ಕೆ ಹಾಗೂ ಶೇಕಡಾ ಮೂರರಿಂದ ಶೇಕಡ ಏಳರಷ್ಟಕ್ಕೆ ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ. ಸದರಿ ಅಧಿನಿಯಮದಡಿ ಒಟ್ಟು ಮೀಸಲಾತಿಯನ್ನು ಶೇ.50 ರಿಂದ ಶೇ.56ಕ್ಕೆ ಹೆಚ್ಚಿಸಲಾಗಿರುತ್ತದೆ.<br>ಅದರಂತೆ 100 ಬಿಂದುಗಳ ರೋಸ್ಟರ್‌ನ್ನು ಪರಿಷ್ಕರಿಸಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2022, ದಿನಾಂಕ 28.12.2022ನ್ನು ಹೊರಡಿಸಲಾಗಿದೆ |
| ಇ) | ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ನೇಮಕಾತಿ ಮೀಸಲಾತಿ ಪ್ರಮಾಣವನ್ನು ಹಾಗೂ 384 ಕೆಎಎಸ್ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯನ್ನು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ರದ್ದು ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಆದೇಶದನ್ವಯ 384 ಕೆಎಎಸ್ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಸಂಪೂರ್ಣ ನೇಮಕಾತಿ ಅಧಿಸೂಚನೆ ರದ್ದುಪಡಿಸಿರುವುದಿಲ್ಲ, ಸದರಿ ಅಧಿಸೂಚನೆಯಲ್ಲಿನ ಹುದ್ದೆಗಳ ವರ್ಗೀಕರಣವನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2022, ದಿನಾಂಕ 28.12.2022ನ್ನು ರದ್ದು ಪಡಿಸಿರುತ್ತದೆ; |
| ಈ) | ಬಂದಿದ್ದಲ್ಲಿ, ಯಾವ ಕಾರಣಕ್ಕಾಗಿ ಈ ಮೀಸಲಾತಿ ಪ್ರಮಾಣವನ್ನು ಕೆಎಟಿ ನ್ಯಾಯಾಲಯವು ರದ್ದುಪಡಿಸಿದೆ: ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು: (ವಿವರ ನೀಡುವುದು) | ಮಾನ್ಯ ನ್ಯಾಯ ಮಂಡಳಿಯು ದಿನಾಂಕ 28.05.2025 ರಂದು ನೀಡಿರುವ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ (ರಿಟ್ ಅರ್ಜಿ ಸಂಖ್ಯೆ: 17968/2025) ಮೇಲ್ಮನವಿಯನ್ನು ಸಲ್ಲಿಸಲಾಗಿರುತ್ತದೆ.<br>ಪ್ರಸ್ತುತ ಪ್ರಕರಣವು ದಿನಾಂಕ:31.07.2028 ರಂದು ಪ್ರಾಥಮಿಕ ವಿಚಾರಣೆಗೆ ಬಂದಿರುತ್ತದೆ. ಸದರಿ ಪ್ರಕರಣದ ವಿಚಾರಣೆಯ ನಂತರ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಉದ್ಧೃತ ಭಾಗ ಈ ಕೆಳಕಂಡಂತಿದೆ<br>"As an interim order, **it is provided that the Public Service Commission may go ahead with the selection process, however, result of the selection shall not be commenced without the leave of the Court**."<br>ಸದರಿ ಮಧ್ಯಂತರ ಆದೇಶದನ್ವಯ ಕ್ರಮವಹಿಸಲಾಗುತ್ತಿದೆ. |
| | ಕೆಪಿಎಸ್‌ಸಿ ಯಿಂದ ನಡೆಸುವ ಈಗಾಗಲೇ ಎರಡು ವರ್ಷಗಳಿಂದ ವಿವಿಧ ನೇಮಕಾತಿ ಹಂತದಲ್ಲಿರುವ ಹಾಗೂ ಅಂತಿಮ ಆಯ್ಕೆಪಟ್ಟಿ ಸಿದ್ಧಗೊಂಡಿರುವ ಅಧಿಸೂಚನೆಗಳ ಮೇಲೂ ಕೆಎಟಿ ನೀಡಿರುವ ತೀರ್ಪು ಪರಿಣಾಮ ಬೀರಲಿದೆಯೇ; ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ" | |

**ಸಿಆಸುಇ 214 ಸೇನೆನಿ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ